"ಹಾಗೆ ಹೇಳ್ಬೇಡಿ ಸರ್. ಸಾಕ್ಷ್ಯ ನನ್ಗೆ ಬೇಡ. ಆದ್ರೆ ನನ್ ಹೆಂಡ್ತಿ ನಂಬ್ತಾ ಇಲ್ಲ. ಅವ್ಳು ನನ್ನನ್ನೇ ದೂರುತ್ತಾಳೆ. ಈ ವಿಷಯವಾಗಿ ನಮ್ಮಲ್ಲಿ ಯಾವಾಗಲೂ ಜಗಳ ಆಗ್ತಾ ಇದೆ. ನನ್ಗೆ ನೆಮ್ಮದಿನೇ ಇಲ್ಲ. ಅವ್ನೇ ಹಣ ಕದ್ದವನು ಅಂತ ಸಾಕ್ಷಿ ಸಮೇತ ರುಜುವಾತು ಮಾಡಿಬಿಡಿ. ಅಷ್ಟು ಸಾಕು." ಬೋಪಣ್ಣ ಕೈ ಮುಗಿದು ಕೇಳಿಕೊಂಡ.

ಕರಮಚಂದ ಗಲ್ಲಕ್ಕೆ ಕೈಯಾನಿಸಿ, ತುಸು ಹೊತ್ತು ಮೌನವಾದ. ನಂತರ, ಆತ ಚಪ್ಪಾಳೆ ಹೊಡೆದು, ಪದ ಜೋಡಿಸಿದ,

"ಓಕೆ, ನಿಮ್ ಕೇಸನ್ನು ತೆಗೆದುಕೊಳ್ತೀನಿ. ಈಗ ಹೇಳಿ, ನೀವು ಹಣ ಇಡೋದೆಲ್ಲಿ?"

"ಕಪಾಟಿನಲ್ಲಿ. ಅದು ನಮ್ ಬೆಡ್‌ರೂಮಿನ ಪಕ್ಕದ ಕೋಣೆಯಲ್ಲಿದೆ. ಹಣ ಕಾಣೆಯಾಗ್ಲಿಕ್ಕೆ ಶುರುವಾದೊಡನೆ ನಾನು ಅದರ ಕೀಯನ್ನು ಬೆಡ್‌ರೂಮಿನಲ್ಲೇ ಇಡೋಕೆ ಆರಂಭಿಸಿದೆ. ಹಾಗಿದ್ರೂ ಕಳವಾಗುತ್ತಿತ್ತು. ಆತನಲ್ಲಿ ನಕಲಿ ಕೀ ಇರಬಹುದು ಅಥವಾ ಹಗಲು ಹೊತ್ತಿನಲ್ಲಿ ಬೀಗ ಹಾಕಿರೋದಿಲ್ಲವಲ್ಲ. ಆವಾಗ್ಲೂ ಕಳವಾಗುತ್ತಿರಬಹುದು."

"ಮನೆಯೊಳಗೇ ಬೀಗ ಹಾಕಿಕೊಂಡಿರುವುದು ನಿಜಕ್ಕೂ ಖೇದಕರ ಸಂಗತಿಯೇ. ಸರಿ, ನೀವು ಆತನಲ್ಲಿ ವಿಚಾರಿಸಲಿಲ್ವೆ?"

"ವಿಚಾರಿಸಿದೆ. ಅವ್ನ ಕೋಣೆನೂ ತಲಾಶು ಮಾಡಿದ್ದೆ ನಾಲ್ಕು ಸಾವಿರ ಕಾಣೆಯಾದಾಗ. ಅಲ್ಲೇನೂ ಸಿಗಲಿಲ್ಲ. ಸುಮ್ನೆ ಮನೆಯೊಳಗೆ ಜಗಳ ಆಯ್ತು, ಅಷ್ಟೇ."

"ಮಗನೇ ಕಳ್ಳ ಅಂತ ನೀವು ಹೇಗೆ ಹೇಳ್ತೀರಿ? ನಿಮ್ ಮಗಳೂ ಕದ್ದಿರಬಹುದು. ಕೆಲಸದವ ನೀಲಕಂಠ ಕದ್ದಿರಬಾರದೇ?"

"ನಾನೂ ಹಾಗೇ ಅಂದುಕೊಂಡಿದ್ದೆ. ನೀಲಕಂಠ ಕಳ್ಳನಾಗಿರಬಹುದು ಅಂತ. ಆದ್ರೆ ಒಮ್ಮೆ ಆತ ತನ್ನ ಬಂಧುಗಳನ್ನು ನೋಡಲು ಎರಡು ದಿನ ಹೋಗಿದ್ದ. ಆ ದಿನವೂ ಕಳ್ಳತನವಾಯಿತು. ಅದು ಹೇಗೆ ಸಾಧ್ಯ? ಮಗಳ ಬಗ್ಗೆ ನನ್ಗೆ ಚೆನ್ನಾಗಿ ಗೊತ್ತು. ಆಕೆ ಅಂತಹವಳಲ್ಲ." ಮಾತು ವಿಶ್ವಾಸ ಬಿಂಬಿಸಿತು.

"ಸಾಕ್ಷಿ ತೋರಿಸಿದರೆ, ನೀವು ಮಗನ್ನ ಜೈಲಿಗೆ ಕಳಿಸ್ತಿರೇನು?" ಅನುಮಾನ ಹೊರಹಾಕಿದೆ.

"ಇಲ್ಲಾ, ಸಾರ್! ಆದ್ರೆ ಹೆಂಡತಿಯ ಪೀಡೆ ತಪ್ಪಬಹುದು. ಆಕೆ ನನ್ಗೆ ಮನೋವ್ಯಾಧಿ, ವೈದ್ಯರ ಬಳಿ ಹೋಗಬೇಕು ಅಂತಿದ್ದಾಳೆ. ನನ್ನ ನೆಮ್ಮದಿ ಕೆಟ್ಟುಹೋಗಿದೆ. ನೀವೊಮ್ಮೆ ಬಂದು, ತನಿಖೆ ಮಾಡ್ಬೇಕು ಅಂತ ಕೇಳ್ಕೋತೀನಿ."

"ಸರಿ, ನಿಮ್ ಮನೆಗೆ ಒಮ್ಮೆ ಬರ್ತೀನಿ."

"ಇನ್ನೊಮ್ಮೆ ಕಳ್ಳತನವಾದಾಗ ಕರೀಲಾ?"

"ಬೇಡ, ಅದಕ್ಕೂ ಮುಂಚೆ ಒಮ್ಮೆ ಭೇಟಿ ಕೊಡ್ತೀನಿ."

ತನ್ನ ಮನೆಯ ವಿಳಾಸ, ತನ್ನ ಚರವಾಣಿಯ ಸಂಖ್ಯೆ ನೀಡಿ, ಬೋಪಣ್ಣ ಹೊರಟು ಹೋದ.

ಆನಂತರ ನಾವಿಬ್ಬರೂ ಆತನ ಪ್ರಕರಣದ ಬಗ್ಗೆ ಚರ್ಚಿಸುತ್ತಿರುವಾಗ, ಯಾರೋ ಧಾವಿಸಿ, ಮೆಟ್ಟಿಲೇರಿ ಬರುವ ಸಪ್ಪಳ ತೂರಿಬಂತು. ಕೆಲ ಕ್ಷಣಗಳಲ್ಲಿ ಬಾಗಿಲಲ್ಲಿ ಯುವಕನೊಬ್ಬ ಪ್ರತ್ಯಕ್ಷನಾದ.

"ನಿಮ್ಮಲ್ಲಿ ಕರಮಚಂದ ಯಾರ್ರೀ?" ಆತ ಒರಟಾಗಿ ಕೇಳಿದ.

"ಓಹ್! ಅಜಿತ್ ಬೋಪಣ್ಣ! ಬಾ... ಕುಳಿತುಕೋ... ನಾನೇ ಕರಮಚಂದ." ಮೆಲುವಾಗಿ ನಗುತ್ತಾ ಕುರ್ಚಿಯತ್ತ ಕೈ ತೋರಿದ ಸೀನಿಯರ್. ಆತ ಅವಾಕ್ಕಾದ. ನನಗೆ ಆಗಲೇ ಕಾಣಿಸಿದ್ದು ಮಧು ಮತ್ತು ಅಜಿತ್ ಮುಖಗಳಲ್ಲಿರುವ ಹೋಲಿಕೆ!

"ನಮ್ ತಂದೆ ಇಲ್ಲಿಗ್ ಬಂದಿದ್ರಲ್ಲ? ಅವ್ರು ಏನ್ ಹೇಳಿದ್ರು?" ದನಿ ತುಸು ಮೆತ್ತಗಾಗಿತ್ತು.

"ನೀನು ತಂದೆನ ಹಿಂಬಾಲಿಸಿಕೊಂಡು ಬಂದೆಯಲ್ಲ? ಯಾಕೆ ಅಂತ ಹೇಳು."